# ಭಾರತ ಕಮ್ಯೂನಿಸ್ಟ್ ಪಕ್ಷ (ಮಾವೋವಾದಿ)

## ಕರ್ನಾಟಕ

**ಮಾನ್ಯ ಸಂಪಾದಕರೆ, ವರದಿಗಾರರೆ, ಮಾಧ್ಯಮ ಪ್ರತಿನಿಧಿಗಳೆ,**

ಕ್ರಾಂತಿಕಾರಿ ವಂದನೆಗಳು.

ಉಡುಪಿಯಲ್ಲಿ ನಡೆಯುವ ಕನ್ನಡ ಸಾಹಿತ್ಯ ಸಮ್ಮೇಳನ ಮತ್ತು ಸೌಹಾರ್ದ ಸಮ್ಮೇಳನದ ಕುರಿತಂತೆ ನಮ್ಮ ಈ ಪತ್ರಿಕಾ ಹೇಳಿಕೆಯನ್ನು ಬಿಡುಗಡೆ ಮಾಡುತ್ತಿದ್ದೇವೆ. ಇದನ್ನು ಪರಿಗಣಿಸಿ ಪ್ರಕಟಿಸಬೇಕೆಂದು ಕೋರುತ್ತಿದ್ದೇವೆ.

**ಹೋರಾಟದಲ್ಲಿ ತಮ್ಮೊಂದಿಗೆ,**

**ಗಂಗಾಧರ್**
**ರಾಜ್ಯ ಸಮಿತಿ ಪರವಾಗಿ**
**ಸಿಪಿಐ (ಮಾವೋವಾದಿ)**
**ಕರ್ನಾಟಕ**

**2/12/2007**

---

ದಾಸ ಪರಂಪರೆಯ ಚೇತನ ಕನಕದಾಸರು ಓಡಾಡಿದ ನೆಲ ಉಡುಪಿ. ಜಾನಪದ ಪರಂಪರೆಯ ಭೂತದ ಕೋಲ, ಯಕ್ಷಗಾನ, ಬಯಲಾಟ, ಪಾಡ್ದನ, ಬ್ಯಾರಿ ಹಾಡು, ಭಾಗವತಿಕೆಗಳ ಸಮೃದ್ಧ ಕರಾವಳಿ ಬೆಳೆಯುತ್ತಿರುವ ತುಳು ರಾಷ್ಟ್ರೀಯತೆಯ ನೆಲ, ಊಳಿಗಮಾನ್ಯ ವಿರೋಧಿ ಹೋರಾಟ ನಡೆಸಿದ ಕೋಟಿ ಚನ್ನಯ್ಯರ ತುಳು ನಾಡಿನ ಭಾಗ, ಕನ್ನಡ ರಾಷ್ಟ್ರೀಯತೆ ಹಾಗೂ ಸಂಸ್ಕೃತಿಗೆ ಕೊಡುಗೆ ನೀಡಿದ ಶಿವರಾಮ ಕಾರಂತ ಅವರಂತಹವರು ಹುಟ್ಟಿ ಬೆಳೆದ ಜಿಲ್ಲೆ ಉಡುಪಿ. ಇಲ್ಲಿ 74ನೇ ಕನ್ನಡ ಸಾಹಿತ್ಯ ಸಮ್ಮೇಳನ ಹಾಗೂ ಸೌಹಾರ್ದ ಸಾಹಿತ್ಯ ಸಮ್ಮೇಳನಗಳು ನಡೆಯುತ್ತಿವೆ.

ಕನ್ನಡ ರಾಷ್ಟ್ರೀಯತೆಯ ಮುಂದಿರುವ ಸವಾಲುಗಳು ಮತ್ತದಕ್ಕೆ ಕಂಡುಕೊಳ್ಳಬೇಕಾದ ಪರಿಹಾರಗಳು ಅದಕ್ಕಾಗಿ ಸಾಗಬೇಕಾದ ಹಾದಿಗಳ ಬಗ್ಗೆ ಇಂದು ಗಂಭೀರವಾಗಿ ವಿಚಾರ ಮಂಥನ ನಡೆಯಬೇಕಾದ ಸಂದರ್ಭವಾಗಿದೆ. ಈ ನಿಟ್ಟಿನಲ್ಲಿ ನೋಡಿದಾಗ, ಇದುವರೆಗೂ ನಡೆಯುತ್ತಾ ಬಂದ ಸಾಹಿತ್ಯ ಸಮ್ಮೇಳನಗಳು ಕರ್ನಾಟಕಕ್ಕೆ ಸರಿಯಾದ ನ್ಯಾಯ ಒದಗಿಸಿದಂತೆ ಕಾಣುತ್ತಿಲ್ಲ. ಅದನ್ನು ಸಾಧಿಸಬೇಕಾದ ಜವಾಬ್ದಾರಿ ಮುಂದಿದೆ. ಇದಕ್ಕೆ ಇದುವರೆಗೆ ಸಾಹಿತ್ಯ ಸಮ್ಮೇಳನಗಳು ನಡೆಸಿದ ಚರ್ಚೆಗಳು, ಕನ್ನಡ ನಾಡು, ನುಡಿ, ನೆಲ ಜಲಗಳ ಕುರಿತು ತೆಗೆದುಕೊಳ್ಳಬೇಕಾದ ಕೆಲವು ನಿರ್ಣಯಗಳನ್ನು ಕೂಡ ಇದುವರೆಗೂ ಯಾವ ಸರ್ಕಾರಗಳು ಜಾರಿಗೆ ತಂದಿಲ್ಲದಿರುವುದು ಸ್ಪಷ್ಟ ನಿದರ್ಶನಗಳಾಗಿವೆ. ಶಿವಮೊಗ್ಗದಲ್ಲಿ ನಡೆದ 73ನೇ ಕನ್ನಡ ಸಾಹಿತ್ಯ ಸಮ್ಮೇಳನದ ಯಾವ ನಿರ್ಣಯಗಳೂ ಜಾರಿಯಾಗಿಲ್ಲ. ಖುದ್ದು ಮುಖ್ಯಮಂತ್ರಿ ಉಪಮುಖ್ಯಮಂತ್ರಿ ಆ ಬಗ್ಗೆ ಸ್ಪಷ್ಟ ಭರವಸೆ ನೀಡಿದ್ದರೂ ಆಗಿದ್ದೇನೂ ಇಲ್ಲ. ಕನ್ನಡ ರಾಷ್ಟ್ರೀಯತೆಯ ಬೆಳವಣಿಗೆಗೆ ತೀವ್ರ ರೀತಿಯ ಅಡ್ಡಿಗಳಾದ ವಿದೇಶೀ ಹಿಡಿತ, ದೇಶೀಯ ಕೇಂದ್ರಾಧಿಪತ್ಯ ಮತ್ತದರ ಹಿಂದಿರುವ ಹಿತಾಸಕ್ತಿಗಳ ಬಗ್ಗೆ ಚರ್ಚೆಗಳು ನಡೆದು ತೀರ್ಮಾನಗಳನ್ನು ಕೈಗೊಂಡು ಜಾರಿಗೊಳಿಸಬೇಕಿದೆ. ಗಣರಾಜ್ಯ ವ್ಯವಸ್ಥೆ ಹಾಗೂ ಒಕ್ಕೂಟ ವ್ಯವಸ್ಥೆಯ ಬಗ್ಗೆ ಸರಿಯಾದ ಗ್ರಹಿಕೆ ಜನರ ಮಧ್ಯೆ ತೆಗೆದುಕೊಂಡು ಹೋಗಬೇಕಾಗಿದೆ. ಕನ್ನಡ ರಾಷ್ಟ್ರೀಯತೆ, ಸಾಮ್ರಾಜ್ಯವಾದ ಹಾಗೂ ಕೇಂದ್ರಾಧಿಪತ್ಯದ ಬಂಧನದಲ್ಲಿ ಸಿಲುಕಿ ನಲುಗುತ್ತಿರುವುದು, ಅದರಿಂದಾಗಿ ಕರ್ನಾಟಕದ ಜನ, ನಾಡು, ನುಡಿ, ನೆಲ, ಜಲ, ಪರಿಸರಗಳು ತೀವ್ರ ರೀತಿಯ ಲೂಟಿಗೆ ಒಳಗಾಗಿ ನಾಶವಾಗುತ್ತಿರುವುದನ್ನು ಗಂಭೀರವಾಗಿ ನೋಡಿ ಪರಿಹಾರದ ಬಗ್ಗೆ ಚರ್ಚೆಗಳು ನಡೆಯಬೇಕಿದೆ. ಹೋರಾಟಗಳು ರೂಪುಗೊಳಿಸಬೇಕಿದೆ.

ಈ ಬಾರಿಯ ಉಡುಪಿ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಹಿಂದೂ ಫ್ಯಾಸಿಸ್ಟ್ ಶಕ್ತಿಗಳ ಛಾಪು ಎದ್ದುಕಾಣುತ್ತಿದೆ. ಕರಾವಳಿ ಜಿಲ್ಲೆಗಳಲ್ಲಿ ಹಿಂದೂ ಫ್ಯಾಸಿಸ್ಟ್ ಶಕ್ತಿಗಳ ದುಷ್ಕೃತ್ಯಗಳು ಹೆಚ್ಚುತ್ತಿರುವುದು, ಹಿಂದೂ ಫ್ಯಾಸಿಸ್ಟ್ ವಿಚಾರಧಾರೆಗಳ ಪ್ರಚಾರ ಭರಾಟೆಯಿಂದ ನಡೆದಿರುವುದು ಅದರ ಹಿಂದಿನ ಆರ್ಥಿಕ ಹಾಗೂ ಸಾಮಾಜಿಕ ಹಾಗೂ ರಾಜಕೀಯ ಹಿತಾಸಕ್ತಿಗಳ ಬಗ್ಗೆ ಪ್ರಗತಿಪರ ಶಕ್ತಿಗಳಿಗೆ ತಿಳಿದಿರುವ ವಿಚಾರಗಳಾಗಿವೆ. ಇಂದು ಕರ್ನಾಟಕದ ಜನ, ನೆಲ, ಜಲ, ಸಂಸ್ಕೃತಿ, ಪರಿಸರಗಳ ಮೇಲಿನ ದಾಳಿ ಆಕ್ರಮಣಗಳು ಹಿಂದೆಂದಿಗಿಂತಲೂ ಹೆಚ್ಚಾಗಿದೆ. ಚಾಮಲಾಪುರ, ನಂದಿಕೂರು, ನಂದಗುಡಿ, ಹಾಸನ, ಮಂಗಳೂರುಗಳಲ್ಲಿ ಏಳುತ್ತಿರುವ ವಿದ್ಯುತ್‌ಸ್ಥಾವರಗಳು, ವಿಶೇಷ ಆರ್ಥಿಕ ವಲಯಗಳು, ಜನವಿರೋಧಿ ಹಾಗೂ ಪರಿಸರ ವಿರೋಧಿ ಯೋಜನೆಗಳು ಆಗುತ್ತಿರುವ ಬಲಾತ್ಕಾರದ ಒಕ್ಕಲೆಬ್ಬಿಸುವಿಕೆಗಳು ಹೆಚ್ಚಾಗುತ್ತಿರುವ ಹಿಂದೂ ಫ್ಯಾಸಿಸ್ಟ್ ಆಕ್ರಮಣಗಳು, ದಲಿತರ ಬಹಿಷ್ಕಾರಗಳು, ಆದಿವಾಸಿಗಳು ಹಾಗೂ ಮಹಿಳೆಯರ ಮೇಲಿನ ಆಕ್ರಮಣ, ಶೋಷಣೆಗಳು ಹೆಚ್ಚಾಗುತ್ತಿರುವ ಪ್ರಭುತ್ವ ಮತ್ತು ಅದರ ಖಾಕಿ ಪಡೆಗಳ ದಮನ ದೌರ್ಜನ್ಯ ಕಗ್ಗೊಲೆಗಳು ಇವೆಲ್ಲದರ ಭಾಗವಾಗಿ ಹೆಚ್ಚುತ್ತಿರುವ ಸಾಮ್ರಾಜ್ಯಶಾಹಿ ಸಾಂಸ್ಕೃತಿಕ ದಾಳಿಗಳು .... ಹೀಗೆ ಜನರನ್ನು ಹಾಗೂ ನಾಡನ್ನು ಹಿಂಡಿ ಹಿಪ್ಪೆ ಮಾಡುತ್ತಿರುವ ಜ್ವಲಂತ ಸಮಸ್ಯೆಗಳ ಬಗ್ಗೆ ಸಾಹಿತ್ಯ ಸಮ್ಮೇಳನ ಚರ್ಚೆ ನಡೆಸಿ ಎದುರಿಸಲು ಅಗತ್ಯ ಕಾರ್ಯಾಚರಣೆಗೆ ಇಳಿಯಲು ದಾರಿ ಕಂಡುಕೊಳ್ಳಬೇಕಾದ ಕರ್ತವ್ಯ ಎಲ್ಲರ ಮುಂದಿದೆ. ಆ ದಿಕ್ಕಿನಲ್ಲಿ 74ನೇ ಕನ್ನಡ ಸಾಹಿತ್ಯ ಸಮ್ಮೇಳನ ಪ್ರಯತ್ನಿಸಬೇಕೆಂದು ನಾವು ಕೋರುತ್ತಿದ್ದೇವೆ.

ಇದೇ ವೇಳೆಯಲ್ಲಿ ನಾಡಿನ, ನಿರ್ದಿಷ್ಟವಾಗಿ ಕರಾವಳಿಯ ಪ್ರಗತಿಪರ ಶಕ್ತಿಗಳು ಸೌಹಾರ್ದ ಸಾಹಿತ್ಯ ಸಮ್ಮೇಳನ ನಡೆಸುತ್ತಿದ್ದಾರೆ. ಇದು ಕೋಮುವಾದ ಮತ್ತು ಸಾಮ್ರಾಜ್ಯಶಾಹಿ ಜಾಗತೀಕರಣ ವಿರೋಧಿ ಉದ್ದೇಶಗಳನ್ನು ಸ್ಪಷ್ಟವಾಗಿ ಮುಂದಿಟ್ಟು ನಡೆಸಲಾಗುತ್ತಿದೆ. ಇದು ಒಳ್ಳೆಯ ಬೆಳವಣಿಗೆಯಾಗಿದೆ. ನಾಡಿನ ಜನತೆ ಸ್ವಾಗತಿಸಿ ಬೆಂಬಲಿಸಬೇಕಾದ ಕಾರ್ಯಕ್ರಮವಾಗಿದೆ. ಇದು ಜನಪರ ಪ್ರಗತಿಪರ ಮತ್ತು ನಾಡಿನ ಜನತೆಯ ಆಶೋತ್ತರಗಳನ್ನು ಪ್ರತಿನಿಧಿಸುವ ರೀತಿಯಲ್ಲಿ ರೂಪುಗೊಳಿಸಿ ಮುನ್ನಡೆಸುವ ಜವಾಬ್ದಾರಿ ಎಲ್ಲರದಾಗಿದೆ.

**ಕ್ರಾಂತಿಕಾರಿ ಶುಭಾಶಯಗಳೊಂದಿಗೆ,**

**ಗಂಗಾಧರ್**
**ರಾಜ್ಯ ಸಮಿತಿ ಪರವಾಗಿ**
**ಸಿಪಿಐ (ಮಾವೋವಾದಿ)**
**ಕರ್ನಾಟಕ**

**2/12/2007**